## ಕರಿಬೇವಿನ ಹಣ್ಣು

ಕರಿಬೇವಿನ ಮರದಲ್ಲಿ ಹಣ್ಣನ್ನು ಕಾಣುವುದು ಅಪರೂಪ. ಆದರೆ, ಈ ಮರದಲ್ಲಿ ಎಲೆಯನ್ನು ಕೊಯ್ಯದೆ ಹಣ್ಣಿಗಾಗಿ ಬಿಡಲಾಗಿದೆ.

ಪಕ್ಷಿಗಳಿಗೆ ಆಹಾರವಾಗಿದೆ. ಕರಿಬೇವಿನ ಗಿಡ ಬದುಕುಳಿಯುವುದೇ ಕಷ್ಟ. ಬದುಕಿದರೂ ಹುಳು ಹಿಡಿಯುತ್ತದೆ. ಆದರೆ ಮೇಲ್ಕಂಡ ಮರ ಹಣ್ಣು ಚೆಲುವೆಲ್ಲ ನಂದೆಂದಿತು ಎನ್ನುವಂತಿದೆ. ನೋಡಲು ಆಕರ್ಷಕವಾಗಿ ಕಾಣುತ್ತಿದೆ.

■ ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ





## ಸಿರಿಮನೆಯ ಸೊಬಗಿನ ಜಲಪಾತ

ಕರ್ನಾಟಕ ಕಾಫಿಯ ಬಟ್ಟಲು ಮತ್ತು ಪ್ರಾಕೃತಿಕ ಸೌಂದರ್ಯಗಳ ನೆಲೆವೀಡು ಚಿಕ್ಕಮಗಳೂರು. ಇಲ್ಲಿ ನದಿ, ಕಿರುತೊರೆಗಳು ಸೃಷ್ಟಿಸುವ ಅಗಣಿತ ಜಲಧಾರೆಗಳು ಪ್ರವಾಸಿಗರ ಕಣ್ಮನ ತಣಿಸುತ್ತವೆ.

ಶೃಂಗೇರಿಯಿಂದ ಕಿಗ್ಗಾಕ್ಕೆ ತೆರಳುವ ಮಾರ್ಗದಲ್ಲಿ ಋಷ್ಯ ಶೃಂಗ ದೇವಾಲಯದ ಬಲಭಾಗದ ರಸ್ತೆಯಲ್ಲಿ 8 ಕಿ.ಮೀ. ದೂರ ಕ್ರಮಿಸಿದ ನಂತರ ಈ ಅತ್ಯದ್ಭುತ ಸಿರಿಮನೆ ಜಲಪಾತ ಕಣ್ಣಿಗೆ ಬೀಳುತ್ತದೆ. ಸುಮಾರು 25–30 ಅಡಿ ಎತ್ತರದಿಂದ ಮೂರು ಕವಲುಗಳಾಗಿ ಹಾಲ್ನೊರೆಯಂತೆ ಧುಮುಕುವ ಜಲಧಾರೆಯ ನೋಟ ಅವಿಸ್ಮರಣೀಯ. ಜಲಪಾತದ ಬುಡದವರೆಗೆ ತೆರಳಿ ಬಂಡೆಗಳಿಗೆ ಮೈಚಾಚಿ ಧುಮ್ಮಿಕ್ಕುವ ಜಲಧಾರೆಗೆ ತಲೆಯೊಡ್ಡಿ ನಿಂತರೆ ಸಮಯದ ಪರಿವೆಯೇ ಅರಿವಿಗೆ ಬಾರದು.

ಸ್ವಂತ ವಾಹನ ಅಥವಾ ಶೃಂಗೇರಿಯಿಂದ 16 ಕಿ.ಮೀ. ದೂರ ಆಟೋರಿಕ್ಷಾ ಮೂಲಕವೇ ಜಲಪಾತವನ್ನು ತಲುಪಬೇಕು. ಜಲಪಾತಕ್ಕೆ 2–3 ಕಿ.ಮೀ. ದೂರದವರೆಗೆ ರಸ್ತೆ ತೀರಾ ಹಾಳಾಗಿದ್ದು ಜಾಗರೂಕತೆಯಿಂದ ಸಾಗಬೇಕು. ಜಲಪಾತದ ಮೋಹಕ ದೃಶ್ಯದ ವೀಕ್ಷಣೆಯಿಂದ ಈ ಶ್ರಮ ಸಾರ್ಥಕವೆನಿಸುತ್ತದೆ.

■ ಕೆ. ರಾಮಕೃಷ್ಣ ಸೀಬಿನಕೆರೆ, ತೀರ್ಥಹಳ್ಳಿ

## ಸ್ವಾಭಾವಿಕ ಮೈ ಉಜ್ಜುವ ಬ್ರಶ್

ತುಪ್ಪದ ಹೀರೆಕಾಯಿಯನ್ನು ಅದು ಬಲಿತ ನಂತರ ಹಾಗೆಯೇ ಬಳ್ಳಿಯಲ್ಲೇ ಬಿಟ್ಟು, ಒಣಗಿ ತೊರಳಾದ ನಂತರ ಕಿತ್ತು ತಂದು ಅಟ್ಟದ ಮೇಲೆ ಸೂರಿಗೆ ಕಟ್ಟುತ್ತಿದ್ದರು ನಮ್ಮ ಹಿರೀಕರು. ಮಳೆಗಾಲದ ವೇಳೆ ಅದನ್ನು ತೂತು ಮಾಡಿ ಆ ಬುರುಡೆಗಳಿಂದ ಬೀಜಗಳನ್ನು ಉದುರಿಸಿ ಭೂಮಿಗೆ ಬಿತ್ತನೆ ಮಾಡಲಾಗುತ್ತದೆ. ಅದರ ಸಿಪ್ಪೆ ತೆಗೆದು ತಿರುಳುಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ಬ್ರಶ್‌ಗಳ ರೀತಿ ಬಳಸುತ್ತಿದ್ದರು. ಬಾಲ್ಯದ ವೇಳೆ ಸ್ನಾನ ಮಾಡುವಾಗ ಮೈ ಉಜ್ಜಿಕೊಳ್ಳಲು ಬಳಸುತ್ತಿದ್ದ ಚಪ್ಪಡಿ ಕಲ್ಲಿನ ತುಣುಕು ಅಥವಾ ತುಪ್ಪದ ಹೀರೆಕಾಯಿಯ ಸ್ವಾಭಾವಿಕ ಬ್ರಶ್‌ಗಳು ಕಾಲಾಂತರವಾದಂತೆ ಇವುಗಳ ಜಾಗವನ್ನು ಆಧುನಿಕ ವೈರ್ ಬ್ರಶ್‌ಗಳು ಆಕ್ರಮಿಸಿಕೊಂಡಿವೆ. ಈಗ ಮತ್ತೆ ಅದೇ ಹಳೆಯ ತುಪ್ಪದ ಹೀರೆಕಾಯಿ ಬ್ರಶ್‌ಗಳನ್ನು ವಿವಿಧ ವಿನ್ಯಾಸ ಮತ್ತು ನಮೂನೆಯಲ್ಲಿ ತಯಾರಿಸಿ ಮಾರುಕಟ್ಟೆಗೆ ಬಿಡುತ್ತಿದ್ದಾರೆ.

■ ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ

